

# ವೈಟಮೊ

## ಬೆಳಕಿನ ಹುಳಗಳ ವಿಸ್ಮಯ ಲೋಕ

ಆಗಸದಲ್ಲಿ ಸಾವಿರಾರು ನಕ್ಷತ್ರಗಳು ಮಿನುಗುತ್ತಿವೆಯೋ ಎಂಬ ಹಾಗೆ ಗುಹೆಯಲ್ಲಿ ಬೆಳಕಿನ ಬೀಜಗಳು ಗೋಚರಿಸಿದವು. ಹೊಳೆಯುತ್ತಿದ್ದ ಈ ರತ್ನಮಣಿಗಳನ್ನು ಕಂಡು ಮನಸ್ಸು ಮಗುವಿನಂತೆ ಸಂಭ್ರಮಿಸಿತು. ಅವುಗಳತ್ತ ಕೈ ಚಾಚತೊಡಗಿತ್ತು.

**ಡಾ. ಎಚ್‌.ಎಸ್‌. ಅನುಪಮಾ**

ಕೆಲವು ತಾಣಗಳಿರುತ್ತವೆ, ನೆನಪಿನ ಬಾವಿಯಿಂದ ಸಜೀವವಾಗಿ ಎದ್ದು ಬಂದು ನೆನೆದಾಗಲೆಲ್ಲ ಅಲ್ಲಿ ಹೋಗಿ ನಿಂತು ನೋಡುತ್ತಿರುವ ಭಾವ ಹುಟ್ಟಿಸಿಬಿಡುತ್ತವೆ. ಅಂಥ ಸ್ಥಳಗಳಲ್ಲಿ ನ್ಯೂಜಿಲೆಂಡ್ ದ್ವೀಪ ದೇಶದ ವೈಟಮೊ ಗುಹೆಗಳೂ ಒಂದು.

ಉತ್ತರ ದ್ವೀಪ ಮತ್ತು ದಕ್ಷಿಣ ದ್ವೀಪ ಎಂಬ ಎರಡು ದೊಡ್ಡ ದ್ವೀಪಗಳು ಹಾಗೂ 600 ಸಣ್ಣಪುಟ್ಟ ದ್ವೀಪಗಳು ಸೇರಿ ಆದ ದೇಶ ನ್ಯೂಜಿಲೆಂಡ್. ಸ್ಥಳೀಯ ಮೂಲನಿವಾಸಿ ಮಾವೋರಿಗಳ ಭಾಷೆಯಲ್ಲಿ ಇದು ಅಯೊಟೆಅರೊವಾ. 'ವೈಟಮೊ' ಎನ್ನುವುದು ನ್ಯೂಜಿಲೆಂಡ್ ದೇಶದ ಉತ್ತರ ದ್ವೀಪದಲ್ಲಿರುವ ಒಂದು ಸಣ್ಣ ಊರು. ವಾಣಿಜ್ಯನಗರಿ ಆಕ್ಲೆಂಡಿನಿಂದ ದಕ್ಷಿಣಕ್ಕೆ ಎರಡು ತಾಸು ಚಲಿಸಿದರೆ ವೈಟಮೊ ಸಿಗುತ್ತದೆ.

ನ್ಯೂಜಿಲೆಂಡಿನ ಹಳ್ಳಿಗಾಡಿನ ಚೆಲುವು, ಹಿಮಾಚ್ಛಾದಿತ ಗುಡ್ಡಬೆಟ್ಟಗಳು, ಹಚ್ಚಹಸಿರು ಹೊದ್ದ ದಿಬ್ಬಗಳು, ಸ್ವಚ್ಛ ಊರುಗಳು, ಶುಭ್ರ ನೀರಿನ ತೊರೆಗಳು, ಸರೋವರಗಳು, ಹಸಿರಿರುವಲ್ಲೆಲ್ಲ ನೆಲ ನೋಡುತ್ತ ಮೇಯುವ ದನ, ಕುರಿ, ಕುದುರೆಗಳ ಹಿಂಡು, ಬೆಟ್ಟದ ಇಳಿಜಾರ ಸೆರಗಿನಲ್ಲಿ ಅಲ್ಲೊಂದು ಇಲ್ಲೊಂದು ಮರದ ಹಲಗೆಯ ಬೇಲಿಯೊಳಗೆ ರೈತರ ಸರಳ ಸುಂದರ ವರ್ಣರಂಜಿತ ಮನೆಗಳು, ಹೂಗಿಡ ಬಳ್ಳಿಗಳು ಪ್ರಕೃತಿಯ ಮಡಿಲಲ್ಲಿರುವ ನಿಜ ಭಾವವನ್ನುಕ್ಕಿಸುತ್ತವೆ.

ಸರಿಸುಮಾರು ಐವತ್ತು ಕೋಟಿ ವರ್ಷಗಳ ಕೆಳಗೆ ಪೆಸಿಫಿಕ್ ಕಡಲ ತಳದ ಜ್ವಾಲಾಮುಖಿ ಚಟುವಟಿಕೆಯಿಂದ ರೂಪುಗೊಂಡ ದೇಶ ನ್ಯೂಜಿಲೆಂಡ್. ಐವತ್ತು ಕೋಟಿ ವರ್ಷಗಳಿಂದೀಚೆಗೆ ಕಡಲಾಳದ ಭೂ ಹಲಗೆಗಳ ಚಲನೆ ಮತ್ತು ಜ್ವಾಲಾಮುಖಿ ಚಟುವಟಿಕೆಯಿಂದ ಜೀಲಾಂಡಿಯ ಭೂಭಾಗವು ಸಮುದ್ರದಿಂದ ಮೇಲೆದ್ದು ಕೊನೆಗೆ ನ್ಯೂ ಜಿಲ್ಯಾಂಡಿಯಾ ದೇಶವಾಗಿ ರೂಪುಗೊಂಡಿತು. ಅದು ನಾಗರಿಕಗೊಂಡ ಮನುಷ್ಯರು ವಾಸ ಮಾಡಲು ಹುಡುಕಿಕೊಂಡ ಕೊನೆಯ ನೆಲ ನೆಲೆ ಎನ್ನಬಹುದು. ಉಳಿದ ಭೂಖಂಡಗಳಿಗಿಂತ ದೂರವಾಗಿದ್ದದ್ದರಿಂದಲೋ ಏನೋ ಮನುಷ್ಯ ಇತಿಹಾಸ ಆ ಖಂಡದ ಮಟ್ಟಿಗೆ ಇತ್ತೀಚಿನದು.

ಅಲ್ಲಿಗೆ ಮೊದಲು ಹೋದವರು ಆಗ್ನೇಯ ಏಷ್ಯಾದ ಪಾಲಿನೇಷಿಯನ್ ಕುಲದವರು. ಕ್ರಿ.ಶ. 12ನೇ ಶತಮಾನದಲ್ಲಿ ಕುಪೆ ಎಂಬ ಪೌರಾಣಿಕ ಐತಿಹಾಸಿಕ ನಾಯಕನು ಹಾವೈಕಿ ದ್ವೀಪದಿಂದ ಭಾರೀ ಆಕ್ಟೋಪಸ್ ಅನ್ನು ಹುಡುಕಿ ನಾಶ ಮಾಡಲು ಸಮುದ್ರ ಮಾರ್ಗದಲ್ಲಿ ಚಲಿಸಿ ಇವತ್ತಿನ ನ್ಯೂಜಿಲೆಂಡಿಗೆ ಬಂದನಂತೆ. ಅನಂತರ ಸುತ್ತಮುತ್ತಲ ದ್ವೀಪಗಳಲ್ಲಿದ್ದ